ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ಹೌದು

ಆ) ರೈತರಿಗೆ ಲಾಭದಾಯಕ ಬೆಲೆ ಒದಗಿಸಲು ಹಾಗೂ ಬೆಲೆ ಕುಸಿದಾಗ ರೈತರು ಹತಾಶರಾಗಿ ಮಾರಾಟ ಮಾಡುವುದನ್ನು ತಪ್ಪಿಸಲು ಸರ್ಕಾರವು ಕನಿಷ್ಠ ಬೆಲೆ ಯೋಜನೆ (ಫ್ಲೋರ್ ಪ್ರೈಸ್) ರೂಪಿಸಿದ್ದು ಅದನ್ನು ನಿರ್ವಹಿಸಲು ಸುಮಾರು ರೂ. 96.74 ಕೋಟಿಗಳ ಆವರ್ತ ನಿಧಿಯನ್ನು ಸ್ಥಾಪಿಸಿದೆ.

ಹಿಪ್ಪರಗಿ ಅಣೆಕಟ್ಟು ಯೋಜನೆ ವಿಳಂಬವಾಗುತ್ತಿರುವ ಬಗ್ಗೆ

679(213) ಶ್ರೀ ಭರಮಗೌಡ ಅ.ಕಾಗೆ(ಕಾಗವಾಡ)) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆಯ ಅಥಣಿ ತಾಲ್ಲೂಕಿನ ಹಿಪ್ಪರಗಿ ಅಣೆಕಟ್ಟು ಯಾವ ಹಂತದಲ್ಲಿದೆ; ಸದರಿ ಯೋಜನೆಯು ಯಾವಾಗ ಪೂರ್ಣಗೊಳ್ಳುತ್ತದೆ?

ಆ) ಅಣೆಕಟ್ಟಿಗೆ ಭೂ ಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ? ಸರಿಯಾದ ರೀತಿಯಲ್ಲಿ ಪರಿಹಾರ ನೀಡಲಾಗಿದೆಯೇ? ವಿಳಂಬ ಆಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಹಿಪ್ಪರಗಿ ಯೋಜನೆ ಸ್ಪಿಲ್‌ವೆ ಮತ್ತು ನಾನ್ ಸ್ಪಿಲ್‌ವೆ ಕಾಮಗಾರಿಯು ಮುಗಿದಿದ್ದು ಗೇಟುಗಳನ್ನು ತಯಾರಿಸಿ ಅಳವಡಿಸುವ ಗುತ್ತಿಗೆಯನ್ನು ವಹಿಸಲಾಗಿದೆ. ಹಲ್ಯಾಳ ಹಾಗೂ ಐನಾಪೂರ ಏತ ನೀರಾವರಿ ಯೋಜನೆಗಳ ಚ್ಯಾಕ್ವೆಲ್, ಪಂಪಿಂಗ್ ಮೆಷಿನರಿ ಹಾಗೂ ರೈಸಿಂಗ್ ಮೇನ್‌ಗಳ ಟೆಂಡರನ್ನು ಇತ್ತೀಚೆಗೆ ಸ್ವೀಕರಿಸಿದ್ದು ಪರಿಶೀಲಿಸಲಾಗುತ್ತಿದೆ. ಈ ಯೋಜನೆಯನ್ನು ಡಿಸೆಂಬರ್ 2004ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಆ) ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸಂಬಂಧಿಸಿದ ಕಾರ್ಯಗಳು ಪ್ರಗತಿಯಲ್ಲಿದೆ. ಕಾನೂನು ರೀತ್ಯಾ ಹಕ್ಕು ದಾಖಲೆಗಳನ್ನು ಒದಗಿಸಿದ ಐತೀರ್ಪುದಾರರಿಗೆ ಪರಿಹಾರ ಧನ ವಿತರಿಸಲಾಗಿದ್ದು ಯಾವುದೇ ವಿಳಂಬ ಆಗಿರುವುದಿಲ್ಲ.

ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ಉತ್ಪಾದನೆ ಹಾಗೂ ಚುನಾವಣೆ

680(870) ಶ್ರೀ ಭರಮಗೌಡ ಅ.ಕಾಗೆ (ಕಾಗವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಥಣಿ ತಾಲ್ಲೂಕಿನ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 2001-02ನೇ ಸಾಲಿನಲ್ಲಿ ಎಷ್ಟು ಟನ್ ಕಬ್ಬನ್ನು ನುರಿಸಿ ಎಷ್ಟು ಟನ್ ಸಕ್ಕರೆ ಉತ್ಪಾದಿಸಲಾಗಿದೆ.

ಆ) ಇಲ್ಲಿಯವರೆಗೆ ಎಷ್ಟು ಜನ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ. ಯಾವ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ?